**ಸಾಕ್ಷಿಯನ್ನು ದಿಃ 24.02.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದ ಸಂಗತಿಗಳು ಎಲ್ಲಾ ಸತ್ಯವಾಗಿದ್ದು, ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ** ಎದುರುದಾರರ ಪರ ಡಿಜಿಪಿ ವಕೀಲರಿಂದಃ

1. ಮೃತ ಸ್ವಾಮಿ ನನ್ನ ಮಗ. ನನ್ನ ಮಗ 3-4 ವರ್ಷದ ಹಿಂದೆ ತೀರಿಕೊಂಡಿದ್ದಾರೆ. ನನ್ನ ಮಗ ತೀರಿಕೊಂಡಾಗ ಅವನಿಗೆ 40 ವರ್ಷ ವಯಸ್ಸಾಗಿತ್ತು. ಆತನಿಗೆ ಮದುವೆ ಆಗಿರಲಿಲ್ಲ. 2 ರಿಂದ 5 ನೇ ಅರ್ಜಿದಾರರು ನನ್ನ ಹೆಣ್ಣು ಮಕ್ಕಳು.

2. ದೊಡ್ಡಕಾಟೂರು ಗ್ರಾಮದ ಸರ್ವೆ ನಂಬರ್ 167 ನನ್ನ ಮಗ ಸ್ವಾಮಿಗೆ ಸೇರಿದ್ದು. ಅದರಲ್ಲಿ ಒಟ್ಟು 2 ಎಕರೆ ಜಮೀನು ಇದೆ. ಅ ಪೈಕಿ 0.05 3/4 ಗುಂಟೆ ಜಮೀನು ಭೂ ಸ್ವಾದೀನವಾಗಿದೆ. ಈ ಆಸ್ತಿ ಸ್ವಾಮಿಗೆ ಸೇರಿದ್ದು ಎನ್ನುವ ಬಗ್ಗೆ ದಾಖಲೆಯನ್ನು ಸಲ್ಲಿಸಿದ್ದೇನೆ. ಸ್ವಾಧೀನವಾದ ಈ 0.05 3/4 ಗುಂಟೆ ಜಮೀನಿಗೆ ನನ್ನ ಮಗ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ. ಅವತ್ತಿನ ಕಾಲಕ್ಕೆ ಅ ಪರಿಹಾರದ ಹಣ ಕಾನೂನುಬದ್ದವಾಗಿತ್ತು.

3. ನಮ್ಮ ಜಮೀನು 70-80 ಲಕ್ಷ ಬೆಲೆ ಬಾಳುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ. ಬೇರೆಯವರಿಗೆ ಪರಿಹಾರ ಬಂದಿರುತ್ತದೆ. ಅದನ್ನು ಬಿಟ್ಟರೆ ಬೇರೆ ಕಾರಣ ಇರುವುದಿಲ್ಲ. ಬೇರೆಯವರ ಜಮೀನಿನ ಸರ್ವೆ ನಂಬರ್ ಏನು ಮತ್ತು ಎಷ್ಟು ಪರಿಹಾರ ಅವರು ಪಡೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

4. 5858 ದಿನಗಳ ತಡವಾಗಿ ಅಪೀಲನ್ನು ಸಲ್ಲಿಸಿರುವುದಕ್ಕೆ ಸಕಾರಣಗಳನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನು ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು